


ಎಡದಿಂದ ಬಲಕ್ಕೆ:
1. ಅವರಿವರ ಮಾತನ್ನು ಕೇಳುವ ಕೆಸಲವೇ ನಿರಂತರ (4)
3. ಆ ನಾರಿಗೇಕೆ ಬೇಕಿತ್ತು ಈ ತಂತೀವಾದ್ಯ? (3)
4. ಸಹಾಯಕರಾಗಿ ಬರಬೇಕೆಂದು ರಾಜನ ಪತ್ರ (3)
6. ಸಸ್ಯವಲ್ಲದ ಸರ್ವಜೀವಿಗಳ ಇಡೀ ಗುಂಪು (4)
7. ಸಹಕರಿಸಲೆಂದು ಸೂಕ್ತ ದಾನ ನೀಡಿ ನೀಡಿ ಕೈಯೆಲ್ಲ ಖಾಲಿ (4)
9. ಮಂದಾರವನ್ನು ಹುಡುಕಿ ತಂದ ನಂತರದ ದಿನ (4)
12. ಭಾರ್ಗವನ ಮನೆಗೆ ತಲುಪಲು 'ಆಕಾಶ ಹಾದಿ' (4)
14. ಆತುರವನ್ನು ತೋರಿದ್ದಕ್ಕೆ ಕಲಾಯದ ಲೋಹ (3)
15. ವಾಣಿಜ್ಯದ ಕೆಲಸದಲ್ಲಿದ್ದರೆ ವ್ಯಾಪಾರಿಯೇ ತಾನೇ? (3)
16. ಸರ್ವರಿಗೂ ಸರಿಹೊಂದುವ ಶುದ್ಧ ನೀರಿನಾವಾರ (4)

ಮೇಲಿಂದ ಕೆಳಕ್ಕೆ:
1. ಅವರಿವರಿಗಲ್ಲ, ಎಲ್ಲರಿಗೂ ಇದು ಶತ್ರುಬಣ (4)
2. ತವರಿನಲ್ಲಿ ಲಭಿಸುವ ಸೌಲಭ್ಯಗಳು ಬಗೆ ಬಗೆ (4)
3. ಕರುಣೆ ಹೌದು. ಅವನ ಅಂಗಡಿಯಲ್ಲಿ ಎಲ್ಲ ದವಸ ಲಭ್ಯ (3)
5. ಮೋಸ ಹೋದ ಜನರದ್ದು ಹೀಗೊಂದು ಭಾರೀ ಗುಂಪು (3)
6. ಪರಿಣಾಮ ಏನೇ ಇರಲಿ, ಇದಂತೂ ಉಸಿರಾಟದ ವ್ಯಾಯಾಮ (4)
8. ಸ್ಥಾನವೇನೇ ಇರಲಿ, ಮನುಷ್ಯರಂತೆ ಮರಿ ಸಾಕುವ ಪ್ರಾಣಿವರ್ಗ (4)
10. ತರುವುದಿಲ್ಲ ಎಂದೊಡನೆಯೇ ಬರೀ ಅಳು (3)
11. ವೀರಾಸನ ಹಾಕಿ ಪ್ರದರ್ಶಿಸಿದ್ದು ಕಾವ್ಯದ ಒಂಬತ್ತೂ ರುಚಿ (4)
12. ಬಣ್ಣ ಹಚ್ಚುವವರದೇ ಹೌದೇ ಈ ಊರು (4)
13. ಈ ಕಲ್ಲಿನ ಮನೆಗೆ ಆತನೇ ಒಡೆಯ (3)

## 20–08–15ರ ಉತ್ತರಗಳು

ಎಡದಿಂದ ಬಲಕ್ಕೆ:
1. ಅಭ್ಯುದಯ; 3. ಪಂಚಮಿ; 4. ಕ್ಷಿತಿಜ; 6. ತಡಗುಣಿ; 7. ಮಾಯಾಮೃಗ; 8. ಮಕರಂದ; 10. ರಿಣಮುಕ್ತ; 12. ಅಡಿಪಾಯ; 14. ವೈನತೇಯ; 16. ಸುಲಭ; 17. ವಸಡು; 18. ವರ್ತಮಾನ.

ಮೇಲಿಂದ ಕೆಳಕ್ಕೆ:
1. ಅಮಿತ; 2. ಯಕ್ಷಿಣಿ; 3. ಪಂಚಾಮೃತ; 5. ಜನಕ; 7. ಮಾರಾಮಾರಿ; 9. ದಯನೀಯ; 11. ಮುನಿಸು; 13. ಗಡಿನಾಡು; 14. ವೈಭವ, 15. ಯವನ.

# ರೆಕ್ಕೆ ವಿಸ್ತಾರದ ವಿಶ್ವದಾಖಲೆ ಏನು?

ಹಕ್ಕಿ– ಅದು ಹಾರಾಟ ಸಾಮರ್ಥ್ಯ ಸಮಾನಾರ್ಥಕ. ಆದರೆ ವಾಸ್ತವ ಏನೆಂದರೆ ಹಾರಾಟವೇ ಗೊತ್ತಿಲ್ಲದ ಹಕ್ಕಿ ಪ್ರಭೇದಗಳೂ ಬೇಕಾದಷ್ಟಿವೆ. ಹಾರಲಿ, ಹಾರದಿರಲಿ, ಎಲ್ಲ ಹಕ್ಕಿಗಳಿಗೂ ರೆಕ್ಕೆಗಳಂತೂ ಇದ್ದೇ ಇವೆ. ಆಯಾ ಪ್ರಭೇದದ ಹಾರಾಟದ ಅಗತ್ಯಗಳನ್ನು ಅನುಸರಿಸಿ ಹಕ್ಕಿ ರೆಕ್ಕೆಗಳದು ಭಿನ್ನ ಭಿನ್ನ ಆಕಾರ, ವಿಸ್ತಾರ.

ಪ್ರಸ್ತುತ ಬದುಕಿರುವ ಹತ್ತು ಸಾವಿರ ಖಗಪ್ರಭೇದಗಳಲ್ಲೂ 'ಝೇಂಕಾರದ ಹಕ್ಕಿ'ಗಳದೇ ಅತ್ಯಂತ ಚಿಕ್ಕ ರೆಕ್ಕೆ. ದುಂಬಿಗಳನ್ನು ಹೋಲುವಷ್ಟೇ ಅವುಗಳ ರೆಕ್ಕೆ ವಿಸ್ತಾರ. ಭಾರೀ ಗಾತ್ರದ– ವಿಸ್ತಾರದ ರೆಕ್ಕೆಗಳು ಗಿಡುಗ, ರಣಹದ್ದು ಬಾಲ್ಡ್ ಈಗಲ್ ಇತ್ಯಾದಿ ಬೇಟೆಗಾರ ಹಕ್ಕಿಗಳಲ್ಲಿ ತುಂಬ ಸಾಮಾನ್ಯ. ಪಾರಿವಾಳ, ಬಾತುಗಳ (ಚಿತ್ರ–2ಎ) ನಾಲ್ಕು ಮಡಿ ಅಳತೆ– ಎಂದರೆ ಎಂಟು ಅಡಿಗಳಷ್ಟು ರೆಕ್ಕೆ ವಿಸ್ತಾರ– ಬೇಟೆಗಾರ ಹಕ್ಕಿಗಳದು (ಚಿತ್ರ–2ಬಿ). ಕೊಕ್ಕರೆ, ಸ್ಟಾರ್ಕ್ ಇತ್ಯಾದಿ ಹಕ್ಕಿಗಳದೂ ಭಾರೀ ರೆಕ್ಕೆ ಹರವು.

ಕಡಲ ಹಕ್ಕಿಗಳದು ಅತ್ಯಂತ ಅಧಿಕ ರೆಕ್ಕೆ ವಿಸ್ತಾರ. ಅಪರೂಪವಾಗಿ ರೆಕ್ಕೆ ಬಡಿಯುತ್ತ, ವಾರಿಧಿಯ ಮೇಲೇರುವ ಬಿಸಿಗಾಳಿ ಅಲೆಗಳನ್ನು ಸವಾರಿ ಮಾಡುತ್ತ ನಿರಂತರ ತಾಸುಗಟ್ಟಳೆ, ದಿನಗಟ್ಟಳೆ, ತಿಂಗಳು– ವರ್ಷಗಟ್ಟಳೆ ಹಗಲಿರುಳೂ ನೆಲಕ್ಕೇ ಇಳಿಯದೆ ಹಾರಾಡುವ ಆ ವಿಧದ ಹಕ್ಕಿಗಳಲ್ಲೆಲ್ಲ 'ಆಲ್‌ಬಟ್ರಾಸ್'ಗಳದೇ ಅತ್ಯದ್ಭುತ ದಾಖಲೆ. ಅವುಗಳಲ್ಲೂ 'ವ್ಯಾಂಡರಿಂಗ್ ಆಲ್‌ಬಟ್ರಾಸ್" (ಚಿತ್ರ–1)ನದೇ ಈಗಿನ ಸಕಲ ಹಕ್ಕಿಗಳಲ್ಲಿನ ವಿಶ್ವದಾಖಲೆ. ಈ ಪ್ರಭೇದದ ವಯಸ್ಕ ಹಕ್ಕಿಗಳ ಸರಾಸರಿ ರೆಕ್ಕೆ ವಿಸ್ತಾರ ಹತ್ತು ಅಡಿ ನಾಲ್ಕು ಅಂಗುಲ! ಇದೇ ಪ್ರಭೇದದ ಈ ವರೆಗಿನ ಅತ್ಯಧಿಕ ವಿಸ್ತಾರದ ದಾಖಲೆ




ಹನ್ನೊಂದು ಅಡಿ ಹನ್ನೊಂದು ಅಂಗುಲ!

ಆದರೆ ಹಕ್ಕಿಗಳ ಇತಿಹಾಸದಲ್ಲಿ ಇದಕ್ಕೂ ಅಧಿಕ ಅಳತೆಗಳ ಮಹಾ ವಿಸ್ಮಯದ ರೆಕ್ಕೆ ವಿಸ್ತಾರದ ಎರಡು ದಾಖಲೆಗಳು ಲಭ್ಯವಾಗಿವೆ. ನೀವೇ ಗಮನಿಸಿ:

ಈಗ್ಗೆ ಏಳು ದಶಲಕ್ಷ ವರ್ಷಗಳ ಹಿಂದಿನ ಒಂದು ಪಳೆಯುಳಿಕೆ ಆಗಿನ ಕಡಲ ಹಕ್ಕಿಯೊಂದರ ಬೃಹತ್ ವಿಸ್ತಾರವನ್ನು ಸ್ಪಷ್ಟಗೊಳಿಸಿದೆ. 'ಪೆಲಗೋರ್ನಿಸ್ ಚಿಲೆನ್ಸಿಸ್' ಎಂದು ಹೆಸರಿಸಲಾಗಿರುವ ಆ ಹಕ್ಕಿಯ ರೆಕ್ಕೆ ವಿಸ್ತಾರದ ಅಳತೆ ಹದಿನೇಳು ಅಡಿ! (ಚಿತ್ರ–2ಸಿ)

ಸರಿ ಸುಮಾರು ಅಷ್ಟೇ ಕಾಲದಷ್ಟು ಹಿಂದಿನ ಇನ್ನೂ ಹೆಸರಿಸಿಲ್ಲದ ಮತ್ತೊಂದು ಮಹಾನ್ ವಿಸ್ತಾರದ ಹಕ್ಕಿ ಪಳೆಯುಳಿಕೆ ಕಳೆದ ವರ್ಷ ಲಭಿಸಿದೆ. ಆ ಹಕ್ಕಿಯ ರೆಕ್ಕೆ ವಿಸ್ತಾರ ಇಪ್ಪತ್ನಾಲ್ಕು ಅಡಿ! (ಚಿತ್ರ–2ಡಿ) ಇದೇ. ಈ ವರೆಗಿನ ಸಾರ್ವಕಾಲಿಕ ದಾಖಲೆ.

■ ಎನ್. ವಾಸುದೇವ್